ಭಗವಂತನ ಭಕ್ತವಾತ್ಸಲ್ಯವೂ ಹೌದು. ರಾಮಾನುಜರು ಈ ವಿಶಿಷ್ಟ ಅನಿಸಿಕೆಯನ್ನು ತಮ್ಮ ಕೃತಿಗಳಲ್ಲೆಲ್ಲ ನೇರವಾಗಿ ಹಾಗೂ ಸುತ್ತಿ ಬಳಸಿ ಹೇಳಿರುವರು. ಭಗವದ್ಗೀತೆಯ ಏಳನೆಯ ಅಧ್ಯಾಯವಾದ ಜ್ಞಾನವಿಜ್ಞಾನಯೋಗದ ಹದಿನೆಂಟನೆಯ ಶ್ಲೋಕ ಹೀಗಿದೆ:

**ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್ ।**
**ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥**

"ಇವರೆಲ್ಲರೂ ಉದಾರಿಗಳೇ ಸರಿ; ಆದರೆ ಜ್ಞಾನಿಯು ನನ್ನ ಆತ್ಮನೇ ಎಂದು ನನ್ನ ಮತ; ಏಕೆಂದರೆ ಆ ಯುಕ್ತಾತ್ಮನು ನಾನೇ ಅತ್ಯುತ್ತಮ ಗತಿ ಎಂದು ನನ್ನನ್ನೇ ಆಶ್ರಯಿಸಿರುತ್ತಾನೆ."

ಇದಕ್ಕೆ ರಾಮಾನುಜರು ಬರೆದ ಭಾಷ್ಯ ಹೀಗಿದೆ: "ನನ್ನ ಜೀವನವೇ ಅವನ ಮೇಲೆ ಅವಲಂಬಿಸಿದೆ. ಅವನ ಗುರಿಯಾದ ನಾನಿಲ್ಲದೆ ಹೇಗೆ ಅವನು ಬದುಕಿರಲಾರನೋ, ನಾನೂ ಹಾಗೆಯೇ (ನನ್ನ ಗುರಿಯಾದ) ಅವನಿಲ್ಲದೆ ಬದುಕಿರಲಾರೆ." ಭಕ್ತನಿಗೂ ಭಗವಂತನಿಗೂ ಇರುವ ಈ ಪ್ರೇಮದ ಪರಸ್ಪರತೆಯೇ ರಾಮಾನುಜರ ಮುಕ್ತಿಯ ಕಲ್ಪನೆಯನ್ನು, ಶಂಕರಾಚಾರ್ಯರ ಮುಕ್ತಿಯ ಕಲ್ಪನೆಯಿಂದ ಭಿನ್ನವಾಗಿಸುತ್ತದೆ. ಶಂಕರರ ಮುಕ್ತಿಯಲ್ಲಿ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಬ್ರಹ್ಮದಲ್ಲಿ ಲೀನವಾಗುತ್ತಾನೆ; ಆದರೆ ರಾಮಾನುಜರ ಮುಕ್ತಿಯಲ್ಲಿ ಅಂತಹ ವ್ಯಕ್ತಿತ್ವದ ನಾಶವಿಲ್ಲ. ಅವತಾರವೆಂದರೆ ಇದೇ – ಮಾನವನ ಮೇಲಿನ ಪ್ರೇಮದಿಂದ ಭಗವಂತ ಇಳಿದುಬರುವುದು. ನಾಲ್ಕನೆಯ ಆಳ್ವಾರರಾದ ಭಕ್ತಸಾರರ ಹಾಡೊಂದರಲ್ಲಿ, 'ಭಗವಂತನು, ತನ್ನನ್ನು ಪಡೆಯಬೇಕೆಂದು ಏಕಾಗ್ರಚಿತ್ತದಿಂದ ಯೋಗದಲ್ಲಿ ಯಾವನು ಕುಳಿತಿರುವನೋ, ಅವನ ಹೃದಯವನ್ನು ಪ್ರವೇಶಿಸುತ್ತಾನೆ' ಎಂಬ ಭಾವನೆ ಬರುತ್ತದೆ.

ದೇವರು ಮನುಷ್ಯನನ್ನು ಹುಡುಕಿಕೊಂಡು ಬರುವುದು ರವೀಂದ್ರನಾಥ ಟ್ಯಾಗೋರರ ಕಾವ್ಯದಲ್ಲಿಯೂ ಇದೆ. ಒಂದು ಕವನದಲ್ಲಿ ಅವರು, "ಮೂಲೋಕದೊಡೆಯ, ನಾನೇ ಇಲ್ಲದೆ ಇದ್ದರೆ ನಿನ್ನ ಪ್ರೇಮ ಎಲ್ಲಿರುತ್ತಿತ್ತು?" ಎನ್ನುತ್ತಾರೆ. ರಜನೀಕಾಂತ ಸೇನ್ ಎಂಬ ಭಕ್ತಕವಿ ಹೀಗೆ ಹೇಳುತ್ತಾನೆ: "ನನ್ನ ಬಾಳಿನಲ್ಲಿ ಎಂದೂ ನಿನ್ನನ್ನು ಪಡೆಯಲು ಯತ್ನಿಸಲಿಲ್ಲ, ಆದರೆ ನನ್ನನ್ನು ನೀನೇ ಹುಡುಕಿ ಬಂದೆ – ಹೃದಯದಿಂದ ನಾನು ನಿನ್ನನ್ನು ಕರೆಯದೇ ಇದ್ದರೂ, ನೀನು ನನ್ನೆದುರು ಬಂದು ನಿಂತೆ."

ರಾಮಾನುಜರ ವಿಶಿಷ್ಟಾದ್ವೈತದಲ್ಲಿರುವ ದೇವ – ಮಾನವರ ಈ ಪರಸ್ಪರ ಪ್ರೇಮದ ಕಲ್ಪನೆಯನ್ನು ಡಾ. ಎಸ್. ರಾಧಾಕೃಷ್ಣನ್, "ರಾಮಾನುಜರು ಸಾಂತವನ್ನು ಅನಂತದ ಒಂದು ಗುಣವನ್ನಾಗಿಸುತ್ತಾರೆ. ಸಾಂತವೆಂಬ ಗುಣವಿಲ್ಲದೆ ಅನಂತದ ಕಲ್ಪನೆಯಾದರೂ ಹೇಗೆ ಸಾಧ್ಯ? ಆದ್ದರಿಂದ ಅನಂತ ಇರುವುದಕ್ಕೆ ಸಾಂತ ಬೇಕೇ ಬೇಕು ಎಂದು ತಾತ್ತ್ವಿಕವಾಗಿ ವಿವರಿಸುತ್ತಾರೆ" ಎನ್ನುತ್ತಾರೆ.

ರಾಮಾನುಜರ ತತ್ತ್ವ 'ವಿಶಿಷ್ಟಾದ್ವೈತ' ವೆಂದು ಕರೆಯಲ್ಪಟ್ಟರೂ, ಈ ಪದವನ್ನು ಅವರು ತಮ್ಮ ಕೃತಿಗಳಲ್ಲಿ ಎಲ್ಲಿಯೂ ಬಳಸುವುದಿಲ್ಲ. ಈ ಪಂಥದ ಮೂಲ ರಾಮಾನುಜರೇನಲ್ಲ; ಅವರು ಅದರ ಪ್ರವರ್ತಕರಷ್ಟೆ. 'ವಿಶಿಷ್ಟಾದ್ವೈತ' ಎಂಬ ಪದವನ್ನು ವಿಶಿಷ್ಟವಾದ ಅದ್ವೈತ ಎಂದು ಸಾಮಾನ್ಯವಾಗಿ ಅರ್ಥೈಸುತ್ತಾರೆ. ಆದರೆ ಇಲ್ಲಿ ಅದ್ವೈತದ ಯಾವ ವಿಶೇಷ ಇದು ಎಂಬ ಪ್ರಶ್ನೆ ಏಳುತ್ತದೆ. ವಿಶಿಷ್ಟಾದ್ವೈತವನ್ನು ಸಾಂಪ್ರದಾಯಿಕರು **ವಿಶಿಷ್ಟಸ್ಯ ಅದ್ವೈತಂ** (ವಿಶಿಷ್ಟನಾದವನ ಅದ್ವೈತದ ರೂಪ) ಎಂದು ವಿವರಿಸುತ್ತಾರೆ. ಕೆಲವು ಪಾಶ್ಚಾತ್ಯ ವಿದ್ವಾಂಸರುಗಳು, ಡಾ. ಎಸ್. ರಾಧಾಕೃಷ್ಣನ್ ಸಹ ಇದನ್ನು ಅನುಮೋದಿಸುತ್ತಾರೆ. ನಾವು ವಿಶಿಷ್ಟಾದ್ವೈತವನ್ನು ದ್ವಂದ್ವಸಮಾಸವಾಗಿ ತೆಗೆದುಕೊಳ್ಳಬಹುದು – ಬ್ರಹ್ಮ ಅದ್ವೈತವೂ ಹೌದು, ವಿಶಿಷ್ಟ ಗುಣವುಳ್ಳದ್ದೂ ಹೌದು ಎಂಬರ್ಥದಲ್ಲಿ. ವೇದಾಂತ ದೇಶಿಕರು (೧೨೬೮–೧೩೬೯) ತಮ್ಮ 'ನ್ಯಾಯಸಿದ್ಧಾಂಜನ' ದಲ್ಲಿ **ಅಶೇಷ ಚಿತಚಿತ್ ಪ್ರಕಾರಂ ಬ್ರಹ್ಮ ಏಕಮೇವ ತತ್ತ್ವಂ** – ಸಕಲ ಚೇತನಾಚೇತನಗಳನ್ನೂ ತನ್ನ ಪ್ರಕಾರವಾಗಿ ಉಳ್ಳ (ತನ್ನ ಶರೀರವಾಗಿರುವುದರ ಮೂಲಕ) ಬ್ರಹ್ಮವೊಂದೇ ತತ್ತ್ವ ಎಂದಿದ್ದಾರೆ. (ಮುಂದುವರೆಯುವುದು)

## ಸರ್ವತ್ಯಾಗಿಯ ಪರಿವ್ರಾಜಕ ವೀರಗಾಥೆ

**ಸರ್ವತ್ಯಾಗಿಯ ವೀರಗಾಥೆಯ ದೇಶಬಾಂಧವ ಹಾಡು ಬಾ**
**ಶಕ್ತಿಶೌರ್ಯದ ದಿವ್ಯಜೀವನ ತಿಳಿದು ಧನ್ಯತೆ ಹೊಂದು ಬಾ ॥**

ಮುಂದೆಮುಂದಕೆ ಚಲಿಸಿ ನಡೆದನು ಧೀರನಿಲುವಿನ ಚೇತನ
ಗುರಿಯ ಸೇರುವವರೆಗೆ ನಿಲ್ಲದ ದಣಿವು ಕಾಣದ ತನುಮನ ।
ರಾಜರೊಂದಿಗೆ ಜನತೆಯೊಂದಿಗೆ ಭೇದವಿಲ್ಲದೆ ಬೆರೆತನು
ಸಕಲರೊಳಿತನು ಸಾಧಿಸುತ್ತಲಿ ಯುವ ವಿವೇಕಾನಂದನು ॥

ಭಗ್ನಮಂದಿರ ಒಡೆದ ಮನಗಳು ದಾಸ್ಯರಾಷ್ಟ್ರದ ದೃಶ್ಯವು
ದೀನದಲಿತರ ತುಳಿದು ಹೊಸಕುವ ಶಕ್ತಿವಂತರ ವರ್ಗವು ।
'ಏಳಿರೇಳಿರಿ ತ್ಯಾಗಿಪುತ್ರರೆ' ಎಂದು ಗರ್ಜನೆಗೈದನು
ಸ್ಫೂರ್ತಿಚಿಲುಮೆಯೆ ಆಗಿ ನಡೆದನು ಯತಿ ವಿವೇಕಾನಂದನು ॥

ಭಾರತಾಂಬೆಯ ನೋವ ಸಹಿಸದ ಪರಮಹಂಸನ ಶಿಷ್ಯನು
ಭಾರತೀಯರ ಬವಣೆ ನೀಗಲು ಮಾರ್ಗವರಸುತ ನಿಂತನು ।
ನರನ ಸೇವೆಯೆ ಹರನ ಸೇವೆಯು ಎಂಬ ಸತ್ಯವ ಕಂಡನು
ದೇಶಸೇವೆಯ ದೀಕ್ಷೆ ತೊಡುತಲಿ ಋಷಿ ವಿವೇಕಾನಂದನು ॥

ಕಡಲಲೀಜಿದ ಶಿಲೆಯನೇರಿದ ಧ್ಯಾನಯೋಗಿಯು ಅರಿತನು
ಆರ್ಯಋಷಿಗಳ ಜ್ಞಾನರಾಶಿಯ ಪಾಶ್ಚಾತ್ಯಕೆ ಒಯ್ದನು ।
ಧರ್ಮಸಭೆಯಲಿ ವೇದಗೀತೆಯ ಮೊಳಗಿ ಕೀರ್ತಿಯ ತಂದನು
ಘನತೆವೆತ್ತಿಹ ಯತಿಶಿರೋಮಣಿ ಗುರು ವಿವೇಕಾನಂದನು ॥

ಮಹಾಜಲದಿಂ ಹಿಮಾಲಯಕೂ ನಡುವೆ ಬಿಗಿದನು ತಂತಿಯ
ಆತ್ಮಶಕ್ತಿಯ ಹರಿಯಬಿಟ್ಟನು ನಾಶಗೊಳಿಸಲು ಭ್ರಾಂತಿಯ ।
ಆತ್ಮಶ್ರದ್ಧೆಯ ತಾಳಲೊಮ್ಮೆಲೆ ಜೀವರೆಲ್ಲ ಸ್ವತಂತ್ರರು
ಭವ್ಯಭಾರತ ಶಿಲ್ಪಿಯಾದನು ಸಿರಿ ವಿವೇಕಾನಂದನು ॥

**– ಸ್ವಾಮಿ ಗಿರಿಜಾತ್ಮಾನಂದ**